# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 190-ಮಂಗಮ್ಮನಪಾಳ್ಯ

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ. ಸ.ಕಾ.ನಿ.ಅ. (ಹೆಚ್.ಎಸ್.ಆರ್ ಉಪವಿಭಾಗ) ರವರು ದಿನಾಂಕ: 23.03.2022 ಬುಧವಾರ ಬೆಳಗ್ಗೆ 11.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಹೆಚ್.ಎಸ್.ಆರ್ ಉಪವಿಭಾಗ (ವಾರ್ಡ್ ಕಛೇರಿ) 9ನೇ ಮುಖ್ಯ ರಸ್ತೆ. 14ನೇ ಅಡ್ಡ ರಸ್ತೆ. 6ನೇ ಸೆಕ್ಟರ್. ಹೆಚ್.ಎಸ್.ಆರ್ ಬಡಾವಣೆ. ಬೆಂಗಳೂರು-560102. ರಲ್ಲಿ ನಡೆಸಿದ ವಾರ್ಡ್ ಸಂಖ್ಯೆ: 190-ಮಂಗಮ್ಮನಪಾಳ್ಯ. ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು/ನೋಡಲ್ ಅಧಿಕಾರಿಗಳು, ಸಹಾಯಕ ಅಭಿಯಂತರರು / ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಟಿ ಹನುಮಂತರಾಯ | ವಾರ್ಡ್ ನೋಡಲ್ ಅಧಿಕಾರಿ (ಎ.ಇ.ಇ) | 8105005285 |
| 2 | ಶ್ರೀ ರಾಜಗೋಪಲ್ ಬಾಬು.ಎನ್ | ಕಾರ್ಯದರ್ಶಿ. ಸಹಾಯಕ ಅಭಿಯಂತರರು ವಾರ್ಡ್ ಸಂ.190 | 9480688190 |
| 3 | ಶ್ರೀ ಸೈಯದ್ ಸಲಾಂ | ಸದಸ್ಯರು | 9035084140 |
| 4 | ಶ್ರೀ ಸುರೇಶ್ ರೆಡ್ಡಿ | ಸದಸ್ಯರು | 9900388075 |
| 5 | ಶ್ರೀ ಗೋಪಿನಾಥ್ | ಸದಸ್ಯರು | 9243111520 |
| 6 | ಶ್ರೀ ಎನ್.ಜೆ ಮ್ಯಾಥ್ಯೂ | ಮುನೇಶ್ವರ ನಗರ ಕಲ್ಯಾಣ ಕ್ಷೇಮಾಭಿವೃದ್ಧಿ ಸಂಘ | 9900134754 |
| 7 | ಶ್ರೀ ಟಿ..ಎ ಮೌಲಸಾಬ್ | ಕಲ್ಯಾಣ ಕ್ಷೇಮಾಭಿವೃದ್ಧಿ ಸಂಘ | 990034140 |
| 8 | ಶ್ರೀ ಸಾಯಿಬಣ್ಣ | ಸಹಾಯಕ ಕಾರ್ಯಪಾಲಕ ಅಭಿಯಂತರರು. ಬಿ.ಬ್ಲಡ್ಯೂ.ಎಸ್.ಎಸ್.ಬಿ | 9845444039 |
| 9 | ಶ್ರೀ ಎಂ ವೆಂಕಟೇಶ್ | ಎ.ಎಸ್.ಐ ಬಂಡೇಪಾಳ್ಯ ಪೋಲಿಸ್ ಠಾಣೆ | 9945576698 |
| 10 | ಶ್ರೀ ಎಸ್.ಸುಧೀರ್ | ಹಿರಿಯ ಪಶುವೈದ್ಯಕೀಯ ಇನ್ಸ್‌ಪೆಕ್ಟರ್ | 9845226800 |
| 11 | ಶ್ರೀ ಡಿ ವಿಜಯಕುಮಾರ್ | ಕಿರಿಯ ಅಭಿಯಂತರರು. ಬೆಸ್ಕಾಂ | 9900268649 |
| 12 | ಶ್ರೀ ಹೆಚ್.ಆರ್. ಹರೀಶ್ | ಅರಣ್ಯ ವಲಯ ಅಧಿಕಾರಿ (ಬೊ.ವ.) | 9742612471 |
| 13 | ಶ್ರೀ ವಿನೋದ್.ಜಿ | ಹಿರಿಯ ಆರೋಗ್ಯ ಪರಿವೀಕ್ಷಕರು | 9844629911 |
| 14 | ಶ್ರೀ ವಿಕಾಸ ಡಿ.ಎಸ್. | ಕಿರಿಯ ಅಭಿಯಂತರರು. ಬಿಡಬ್ಲ್ಯೂ.ಎಸ್.ಎಸ್.ಬಿ | 91108239389 |
| 15 | ಶ್ರೀ ಅನಂತ ಪದ್ಮನಾಭನ ವೈ.ವಿ | ಕಂದಾಯ ಪರಿವೀಕ್ಷಕರು | 9448086720 |
| 16 | ಶ್ರೀ ಸತೀಶ್. ಜಿ.ಎನ್ | ವಾಟರ್ ಇನ್ಸ್‌ಪೆಕ್ಟರ್ ಬಿ.ಡಬ್ಲ್ಯೂ.ಎಸ್.ಎಸ್.ಬಿ | 8722481759 |
| 17 | ಶ್ರೀ ಹೆಚ್.ನರಸಪ್ಪ | ತೋಟಗಾರಿಕೆ ನಿರೀಕ್ಷಕರು | 8105663239 |
| 18 | ಶ್ರೀ ಸುನೀಲ್ | ಬೀದಿ ದೀಪ ನಿರ್ವಾಹಕರು | 7022382504 |

(2......)

Scanned with

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ, ಸದಸ್ಯರಿಗೆ ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸುತ್ತಾ, ಸಭೆಯನ್ನು ಆರಂಭಿಸಿದ್ದರು.

- **ಘನತ್ಯಾಜ್ಯ :-**

1. ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲವೆಂದು ಹಾಗೂ ಕಸವನ್ನು ಬೃಹತ್ ಮಳೆ ನೀರುಗಾಲುವೆಗೆ ಸುರಿಯುತ್ತಿರುವುದಾಗಿ ಮ್ಯಾಥ್ಯೂ ರವರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಪೌರಕಾರ್ಮಿಕರಿಗೆ ಮತ್ತು ಮಾರ್ಷಲ್ ರವರಿಗೆ ಸೂಚಿಸಲಾಗುವುದೆಂದು ತಿಳಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಗುಜರಿ ಅಂಗಡಿಯಲ್ಲಿ ಬಯೋ ವೇಸ್ಟ್ ವಿಲೇವಾರಿಗೆ ಬೆಂಕಿ ಹಾಕುತ್ತಿದ್ದು, ಎಲ್ಲಾ ಗುಜರಿ ಅಂಡಿಗಳನ್ನು ಪರಿಶೀಲಿಸಿ ಪರವಾನಗಿ ಪಡೆದುಕೊಳ್ಳದವರಿಗೆ ಅಂಗಡಿಗಳನ್ನು ಮುಚ್ಚುವಂತೆ ತಿಳಿಸಿದರು. ಗುಜರಿ ಅಂಗಡಿಗಳನ್ನು ವಸತಿಯೇತರ ಪ್ರದೇಶದಿಂದ ಹೊರಗಡೆ ಅಂಗಡಿಗಳನ್ನು ನಡೆಸಲು ಶ್ರೀ ಸೈಯದ್ ಸಲಾಂ ರವರು ತಿಳಿಸಿದರು.

- **ಸಂಚಾರಿ ಪೋಲಿಸ್ ಠಾಣೆ :-**

1. ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಸುಮಾರು 20 ವರ್ಷಗಳಿಂದ ದ್ವಿಚಕ್ರ ಮತ್ತು ಕಾರುಗಳನ್ನು ನಿಲ್ಲಿಸುತ್ತಿದ್ದು ಇದನ್ನು ತೆರವುಗೊಳಿಸಿ ಪ್ರಕರಣ ದಾಖಲಿಸಲು ಸದ್ಯಸರು ತಿಳಿಸಿದರು ಹಾಗೂ ಮುಂದಿನ ಸಭೆಗೆ ಎಷ್ಟು ವಾಹನಗಳ ಮೇಲೆ ಪ್ರಕರಣ ದಾಖಲಿಸಿರುವ ಬಗ್ಗೆ ವರದಿ ನೀಡುವಂತೆ ವಾರ್ಡ್ ಸದಸ್ಯರು ಕೋರಿದರು. ಸಂಚಾರಿ ಪೋಲಿಸ್ ಇನ್ಸ್‌ಪೆಕ್ಟರ್ ರವರು ಮಾತನಾಡುತ್ತಾ ಕಾನೂನು ಸುವ್ಯವಸ್ಥೆ ಇನ್ಸ್‌ಪೆಕ್ಟರ್ ರವರು ವಾಹನಗಳನ್ನು ತೆಗೆದುಕೊಂಡು ಹೋಗುವುದಾಗಿ ಸಭೆಗೆ ತಿಳಿಸಿದರು. No Parking ಪ್ರದೇಶದಲ್ಲಿ ನಿಲ್ಲಿಸಿರುವ ವಾಹನಗಳನ್ನು ನಂಬರ್ ಪರಿಶೀಲಿಸಿದಾಗ ಸುಮಾರು ರೂ. 20,000.00 ರಿಂದ 25,000.00 ವರೆಗೆ ದಂಡ ವಿಧಿಸಿದ್ದು, ಪಾವತಿಸದೆ ಇರುವುದು ಕಂಡು ಬಂದಿರುತ್ತದೆ. ಹಾಗೂ ವಾಹನಗಳ್ನು ಹಾಜರು ಹಾಕುವುದಾಗಿ ತಿಳಿಸಿದರೂ ಇದಕ್ಕೆ ಗಮನ ಕೊಡದೆ ಮರು ಬಾರದೇ ಇರುವುದು ಗಮನಿಸಲಾಗಿರುತ್ತದೆ. ಆದರೂ ಪ್ರದೇಶದಲ್ಲಿ ನಿಲ್ಲಿಸಿದಲ್ಲಿ ದೂರನ್ನು ಸಲ್ಲಿಸಲು ಸಂಚಾರಿ ಪೋಲಿಸ್ ಠಾಣೆಗೆ ಸಲ್ಲಿಸಿದ್ದಲ್ಲಿ ಕ್ರಮ ಜರುಗಿಸಲಾಗುವುದೆಂದು ಹಾಜರಿದ್ದ ಸಂಚಾರಿ ಪೋಲಿಸ್ ಇನ್ಸ್‌ಪೆಕ್ಟರ್ ರವರು ಸಭೆಯಲ್ಲಿ ತಿಳಿಸಿದರು.

- **ಪಶುಸಂಗೋಪನೆ**

1. ಹಿಂದಿನ ಹಲವು ಸಭೆಗಳಲ್ಲಿ ಚರ್ಚಿಸಿರುವಂತೆ, ಬೀದಿ ನಾಯಿಗಳ ಬಗ್ಗೆ ಇಂದಿನ ಸಭೆಯಲ್ಲಿ Animal Birth Control (ABC) ತಂಡದಿಂದ ಸರ್ವೆ ಮಾಡಿ ವರದಿ ನೀಡುತ್ತಿರುವುದಾಗಿ ಶ್ರೀ ಸುಧೀರ್ ಪಶುಸಂಗೋಪನೆ ರವರು ವಾರ್ಡ್ ಸಭೆಯಲ್ಲಿ ತಿಳಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಮಾಂಸದ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಲಾಗುತ್ತಿಲ್ಲವೆಂದು ಹಾಗೂ ಮಾಂಸದ ಅಂಗಡಿಗಳನ್ನು ಪಟ್ಟಿ ಮಾಡಿ ಮಾಲೀಕರ ದೂರವಾಣಿ ಸಂಖ್ಯೆಯನ್ನು ಮುಂದಿನ ಸಭೆಯಲ್ಲಿ ಸಲ್ಲಿಸಲು ಶ್ರೀ ಸೈಯದ್ ಸಲಾಂ ಮತ್ತು ಇತರೆ ಸದಸ್ಯರು ಸಭೆಯ ಗಮನಕ್ಕೆ ತಂದಿರುತ್ತಾರೆ. ಈ ಬಗ್ಗೆ ಶ್ರೀ ಸುಧೀರ್ ಪಶುಸಂಗೋಪನೆ ರವರು ಕ್ರಮ ಕೈಗೊಂಡು ಮುಂದಿನ ಸಭೆಗೆ ಪಟ್ಟಿ ಸಲ್ಲಿಸಲಾಗುವುದೆಂದು ತಿಳಿಸಿದರು
3. ಹಿಂದಿನ ಹಲವು ಸಭೆಗಳಲ್ಲಿ ಚರ್ಚಿಸಿರುವಂತೆ ಹಂದಿಗಳ ಸಾಗಣಿಕೆ ಮತ್ತು ಅದನ್ನು ಹಿಡಿಯಲು ಸಂಬಂಧಪಟ್ಟ ಅಧಿಕಾರಿಗಳು ವಿಫಲವಾಗಿದ್ದು, ಸದರಿ ಹಂದಿಗಳು ಗುತ್ತಿಗೆದಾರರು/ಮಾಲೀಕರುಗಳು ಹಿಡಿಯುವರೆಗೂ ವಾರ್ಡ್ ಪ್ರದೇಶಗಳಲ್ಲಿ ಅಲೆದಾಡುತ್ತಿರುವುದಾಗಿ ಇದಕ್ಕೆ ತಾಂತ್ರಿಕವಾಗಿ ಖಾಯಂ ಹಂದಿಗಳ ಸಾಗಣಿಕೆ ಬಗ್ಗೆ ಪರಿಹಾರ ಮಾಡಿಸುವಂತೆ ಶ್ರೀ ಸೈಯದ್ ಸಲಾಂ, ಶ್ರೀ ಸುರೇಶ್ ರೆಡ್ಡಿ ರವರುಗಳು ಸಭೆಯಲ್ಲಿ ಕೋರಿರುತ್ತಾರೆ. ಈ ಬಗ್ಗೆ ಮಾನ್ಯ ಉಚ್ಚನ್ಯಾಯಾಲಯದ ಆದೇಶದಂತೆ ಹಂದಿಗಳನ್ನು ಹಿಡಿದರೆ ನಮ್ಮ ವಿರುದ್ಧ ಎಫ್.ಎ.ಆರ್ ಪ್ರಕರಣ ದಾಖಲಿಸುವುದಾಗಿ ಹಾಗೂ ಇದರ ಬಗ್ಗೆ ಕಾನೂನು ಕೋಶದ ಮುಖ್ಯಸ್ಥರಿಗೂ ಸಹ ಕಡತವನ್ನು ಸಲ್ಲಿಸಲಾಗಿರುತ್ತದೆ. ಎಂದು ಶ್ರೀ ಸುಧೀರ್, ಪಶುಸಂಗೋಪನೆ ರವರು ತಿಳಿಸಿದರು. ಶ್ರೀ ಸೈಯದ್ ಸಲಾಂ ರವರು ಮಾತನಾಡುತ್ತಾ, ಈ ವಿಯಷದ ಕುರಿತು ಪತ್ರ ಮುಖೇನ ನೀಡಲು ಸಭೆಯಲ್ಲಿ ತಿಳಿಸಿದರು.

(3.....)

Scanned with

- **ಬೀದಿ ದೀಪ**

1. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆ ಹಾಗೂ 2ನೇ ಅಡ್ಡ ರಸ್ತೆಯ ಮದೀನ ನಗರದಲ್ಲಿ ಬೀದಿ ದೀಪ ಇಲ್ಲದೆ ಇರುವುದರಿಂದ ಸಾರ್ವಜನಿಕರಿಗೆ ರಾತ್ರಿ ವೇಳೆಯಲ್ಲಿ ಓಡಾಡಲು ಕಷ್ಟಕರವಾಗುತ್ತಿದೆ ಎಂದು ಸಭೆಯಲ್ಲಿ ಶ್ರೀ ಸೈಯದ್ ಸಲಾಂ ಮತ್ತು ಇತರೆ ವಾರ್ಡ್ ಸದಸ್ಯರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಸಹಾಯಕ ಅಭಿಯಂತರರು, ಬೀದಿ ದೀಪ ರವರು ಸಭೆಗೆ ಗೈರು ಹಾಜರಿದ್ದು, ಅವರ ಪರವಾಗಿ ಸಭೆಯಲ್ಲಿ ಹಾಜರಿದ್ದ ಶ್ರೀ ಸುನೀಲ್ ಬೀದಿ ದೀಪ ನಿರ್ವಾಹಕರು ಈಗಾಗಲೇ ಎಲ್.ಇ.ಡಿ ಬೀದಿ ದೀಪಗಳನ್ನು ಎಲ್ಲಾ ಕಡೆ ಅಳವಡಿಸುತ್ತಿದ್ದು, ಎಲ್ಲಿ ಅವಶ್ಯಕವಾಗಿದೆಯೋ ಅಂತಹ ಜಾಗಗಳ ಪಟ್ಟಿ ಮಾಡಿ ನೀಡಿದರ ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

- **ಬಿ.ಡಬ್ಲ್ಯೂ.ಎಸ್.ಎಸ್.ಬಿ.**

1. ಬೇಸಿಗೆ ಕಾಲ ಸಮಿಪಿಸುತ್ತಿರುವುದರಿಂದ, 2 ರಿಂದ 3 ದಿನಗಳಿಗೊಮ್ಮೆ ಕುಡಿಯುವ ನೀರಿನ್ನು ಬಿಡುವಂತೆ ಈಗಾಗಲೇ ಅಧ್ಯಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಮತ್ತು ಸಂಬಂಧಪಟ್ಟ ಅಭಿಯಂತರರಿಗೆ ಅರ್ಜಿಯನ್ನು ನೀಡಿದ್ದರೂ ಸಹ 8-10 ದಿನಕ್ಕೊಮ್ಮೆ ಕುಡಿಯುವ ನೀರನ್ನು ಬಿಡುತ್ತಿದ್ದು. ಇದರಿಂದ ಸ್ಥಳೀಯ ನಿವಾಸಿಗಳಿಗೆ, ಮಕ್ಕಳಿಗೆ, ಹಿರಿಯ ನಾಗರೀಕರಿಗೆ ತುಂಬ ತೊಂದರೆಯಾಗುತ್ತಿರುವ ಬಗ್ಗೆ ಸಭೆಯಲ್ಲಿ ಶ್ರೀ ಸೈಯದ್ ಸಲಾಂ ಮತ್ತು ಇತರೆ ವಾರ್ಡ್ ಸದಸ್ಯರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಸಾಯಿಬಣ್ಣ ಸಹಾಯಕ ಅಭಿಯಂತರರು, ಕೆಲವು ಕಡೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಡೆಯಿಂದ ಕಾಮಗಾರಿ ಕೈಗೆತ್ತಿಕೊಂಡಿರುವುದರಿಂದ ಕುಡಿಯುವ ನೀರನ್ನು ಬಿಡಲು ವ್ಯತ್ಯಾಯವಾಗಿರುತ್ತದೆ ದಿನಾಂಕ: 28.03.2022 ರಿಂದ 4 ರಿಂದ 5 ದಿನಕ್ಕೊಮೆ ನೀರು ಬಿಡಲು ಕ್ರಮವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

- **ಕಂದಾಯ ಇಲಾಖೆ**

1. ಹೊಂಗಸಂದ್ರ ಸರ್ವೆ ಸಂಖ್ಯೆ: 44ರ 10.00 ಗುಂಟೆ ಜಾಗದಲ್ಲಿ ನಾಯಿ ಮತ್ತು ಹಂದಿಗಳ ಕೇಂದ್ರ ಸ್ಥಾಪಿಸುವಂತೆ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾಗಿದ್ದು, ಇಂದಿನ ಸಭೆಯಲ್ಲಿ ಕಂದಾಯ ಅಧಿಕಾರ ರವರ ಪರವಾಗಿ ಸಭೆಗೆ ಹಾಜರಾಗಿದ್ದ ಶ್ರೀ ಅನಂತ ಪದ್ಮನಾಭನ ಕಂದಾಯ ಪರಿವೀಕ್ಷಕರು ರವರಿಗೆ, ಹಿರಿಯ ಆರೋಗ್ಯ ಪರಿವೀಕ್ಷರು ಮತ್ತು ಸದಸ್ಯರು ಸರ್ವೆ ಸಂಖ್ಯೆ: 44ರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲಾಗುತ್ತಿದ್ದು. ಆದುದರಿಂದ ನಾಯಿ ಮತ್ತು ಹಂದಿ ಕೇಂದ್ರವನ್ನು ಬಿ.ಬಿ.ಎಂ.ಪಿ ಕಸದ ಲಾರಿ ಪಾಯಿಂಟ್ ಸುತ್ತಮುತ್ತ ಜಾಗದಲ್ಲಿ ಸ್ಥಾಪಿಸುವಂತೆ ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಶ್ರೀ ಅನಂತ ಪದ್ಮನಾಭನ ಕಂದಾಯ ಪರಿವೀಕ್ಷಕ ರವರು ಕಂದಾಯ ಅಧಿಕಾರಿಗಳ ಗಮನಕ್ಕೆ ತಂದು ಕ್ರಮವಹಿಸಲಾಗುವುದೆಂದು ಸಭೆಗೆ ತಿಳಿಸಿದರು.
2. ಮತದಾರರ ಗುರುತಿನ ಚೀಟಿಗಳನ್ನು ಹೊಸದಾಗಿ ಪಡೆಯಲು ದಿನದ 24 ಗಂಟೆಗೆ ಕಾಲ Online ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಇದನ್ನು ಬಿ.ಎಲ್.ಓ ಮತ್ತು ಕಂದಾಯ ವಸೂಲಿಗಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಅನುಮೋದನೆ ನೀಡಲಾಗುತ್ತದೆ ಎಂದು ಸಭೆಯಲ್ಲಿ ಶ್ರೀ ಅನಂತ ಪದ್ಮನಾಭನ ಕಂದಾಯ ಪರಿವೀಕ್ಷಕ ರವರು ತಿಳಿಸಿದರು

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಸದಸ್ಯರಿಗೆ ಮತ್ತು ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು

N. Riyaghalabalu

ಕಾರ್ಯದರ್ಶಿ ವಾರ್ಡ್ ನಂ.190ರ
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ ವಾರ್ಡ್ ನಂ.190
ಮಂಗಮ್ಮನಪಾಳ್ಯ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಆಪ್ತ ಶಾಖೆಗೆ ಸಲ್ಲಿಸಿದೆ
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯಕ್ತರು, ಬೊಮ್ಮನಹಳ್ಳಿ ವಲಯ ರವರ ಆಪ್ತ ಶಾಖೆಗೆ ಸಲ್ಲಿಸಿದೆ
4. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಆಪ್ತ ಶಾಖೆಗೆ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.

Scanned with